


بسم اللهِ الرّحمٰن الرّحيم

# ಜಲ್ಸ ಸಾಲಾನ ಯು.ಕೆ. 2024 – ಪಾಲ್ಗೊಳ್ಳುವವರಿಗೆ ಮಾರ್ಗದರ್ಶನ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ **'ಹದೀಖತುಲ್ ಮಹ್‌ದಿ'**ಯಿಂದ **26–07–2024** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ)**

أَشْهَدُ أَنْ لَا إِلٰهَ إِلَّا اللّٰهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ.
أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ-بِسْمِ اللّٰهِ الرَّحْمٰنِ الرَّحِيْمِ.
اَلْحَمْدُ لِلّٰهِ رَبِّ الْعٰلَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ. اِيَّاكَ نَعْبُدُ وَاِيَّاكَ نَسْتَعِيْنُ.
اِهْدِنَا الصِّرَاطَ الْمُسْتَقِيْمَ. صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಅಲ್ಲಾಹನ ಅನುಗ್ರಹದಿಂದ ಇಂದು ಬ್ರಿಟನಿನ ಜಲ್ಸ ಸಾಲಾನ ಆರಂಭವಾಗುತ್ತಿದೆ. ಇಲ್ಲಿಗೆ ಸಾವಿರಾರು ಜನರು ಧಾರ್ಮಿಕ ಮತ್ತು ಆಧ್ಯಾತ್ಮಿಕ ವಾತಾವರಣದಿಂದ ಪ್ರಯೋಜನ ಪಡೆಯಲಿಕ್ಕಾಗಿ ಬಂದಿರುವರು. ಈ ದಿನಗಳಲ್ಲಿ ಇಲ್ಲಿ ಹದೀಖತುಲ್ ಮಹ್‌ದಿಯಲ್ಲಿ ಒಂದು ತಾತ್ಕಾಲಿಕ ಪಟ್ಟಣವನ್ನು ನಿರ್ಮಿಸಲಾಗಿದೆ. ಈ ವಾತಾವರಣದಲ್ಲಿ ಇದ್ದುಕೊಂಡು ನಾವು ಲೌಕಿಕ ಕೋಲಾಹಲಗಳಿಂದ ಬೇರ್ಪಟ್ಟು ತಮ್ಮ ತಮ್ಮ ಆಧ್ಯಾತ್ಮಿಕ, ನೈತಿಕ ಸ್ಥಿತಿಗಳನ್ನು ಉತ್ತಮಗೊಳಿಸಲು ಹೀಗೆ ಮಾಡಲಾಗಿದೆ. ಒಟ್ಟಿನಲ್ಲಿ ಇಂತಹ ಸ್ಥಿತಿಗಳಲ್ಲಿ ಅತಿಥಿಗಳಿಗೆ ಯಾವುದಾದರೂ ಸೌಕಾರ್ಯ ಲಭಿಸುವುದರ ಬಗ್ಗೆ ಇರುವ ಚಿಂತೆಗಿಂತ ಯಾವ ರೀತಿಯಲ್ಲಿ ನಾವು ಈ ವಾತಾವರಣದಿಂದ ಹೆಚ್ಚು ಹೆಚ್ಚು ಪ್ರಯೋಜನ ಪಡೆಯುವುದು ಎಂಬ ಚಿಂತೆ ಇರಬೇಕು. ಆದರೆ ಏನೇ ಆಗಲಿ ಮನುಷ್ಯನೊಂದಿಗೆ ಮಾನುಷಿಕ ಅಗತ್ಯಗಳು ಮತ್ತು ಆವಶ್ಯಕತೆಗಳು ಹೊಂದಿಕೊಂಡಿರುತ್ತವೆ. ಆದ್ದರಿಂದ ವ್ಯವಸ್ಥಾಪಕರು ಅತಿಥಿಗಳಿಗಾಗಿ ಸಾಧ್ಯವಾದ ಎಲ್ಲ ಸೌಕರ್ಯಗಳನ್ನು ಒದಗಿಸಲು ಪ್ರಯತ್ನಿಸುತ್ತಾರೆ. ಈ ಉದ್ದೇಶಕ್ಕಾಗಿ ಜಲ್ಸ ಸಾಲಾನದ ದಿನಗಳಲ್ಲಿ ಅನೇಕ ವಿಭಾಗಗಳನ್ನು ಸ್ಥಾಪಿಸಲಾಗುತ್ತದೆ. ಸಾವಿರಾರು ಕಾರ್ಯಕರ್ತರು ಸ್ವ ಇಚ್ಛೆಯಿಂದ ತಮ್ಮ ಸೇವೆಗಳನ್ನು ಹಝ್ರತ್ ಮಸೀಹ್ ಮೌಊದ್[(ಅ)]ರ ಅತಿಥಿಗಳ ಸೇವೆಗಾಗಿ ಅರ್ಪಿಸುತ್ತಾರೆ.

ಈ ಸಂಬಂಧವಾಗಿ ಮೊತ್ತಮೊದಲು ನಾನು ಎಲ್ಲ ಕಾರ್ಯಕರ್ತರೊಡನೆ ಹೇಳಲು ಬಯಸುತ್ತೇನೆ. ತಮ್ಮ ಡ್ಯೂಟಿಗಳನ್ನು ಉತ್ತಮ ರೀತಿಯಲ್ಲಿ ಈಡೇರಿಸಲು ಪ್ರಯತ್ನಿಸಿರಿ. ಜಲ್ಸದ ಅತಿಥಿಗಳನ್ನು ಹಝ್ರತ್ ಮಸೀಹ್ ಮೌಊದ್[(ಅ)]ರ ಅತಿಥಿಗಳೆಂದು ತಿಳಿದುಕೊಂಡು ಸೇವೆ ಮಾಡಿರಿ. ಅತಿಥಿಗಳಿಂದ ಯಾವುದಾದರೂ ತಪ್ಪು ಸಂಭವಿಸಿದೆ ಎಂದು ನಿಮಗೆ ಅನಿಸಿದರೂ ಕೂಡ ಅದನ್ನು ಕಡೆಗಣಿಸಿರಿ. ಅಲ್ಲಾಹನ ಅನುಗ್ರಹದಿಂದ ಪ್ರತಿಯೊಂದು ದೇಶದಲ್ಲಿ ಅತಿಥಿ ಸತ್ಕಾರ ಮತ್ತು ಉನ್ನತ ನೈತಿಕತೆ ಅಹ್ಮದಿಯಾ ಜಮಾಅತಿನ ವಿಶಿಷ್ಟ ಗುಣವಾಗಿ ಬಿಟ್ಟಿದೆ. ಅತಿಥಿಗಳ ಹೃದಯ ಕನ್ನಡಿಯಂತಿರುತ್ತದೆ ಎಂದು ಹಝ್ರತ್ ಮಸೀಹ್ ಮೌಊದ್[(ಅ)] ಹೇಳುತ್ತಿದ್ದರು. ಅತಿಥಿಗಳು ಭಾವುಕರಾಗಿರುತ್ತಾರೆ. ಅವರ ಕಾಳಜಿ ವಹಿಸಬೇಕು. ಕಷ್ಟತೆಗಳು ಮತ್ತು ಅಸೌಕರ್ಯಗಳನ್ನು ಸಹಿಸಬೇಕಾಗುವುದು ಎಂದು ಚೆನ್ನಾಗಿ ತಿಳಿದುಕೊಂಡೇ ಇಲ್ಲಿಗೆ ಹೆಚ್ಚಿನ ಅಹ್ಮದಿಗಳು ಬರುತ್ತಾರೆ. ಈಗ ಜಮಾಅತಿನಲ್ಲಿ ಪ್ರವೇಶಿಸದ ಕೆಲವು ಅತಿಥಿಗಳು ಕೂಡ ಇರುತ್ತಾರೆ. ಅವರ ಬಗ್ಗೆ ವಿಶಿಷ್ಟ ಕಾಳಜಿ ವಹಿಸಬೇಕಾಗುತ್ತದೆ. ಎಲ್ಲ ವಿಭಾಗಗಳು, ಅದು ಟ್ರಾಫಿಕ್ ಆಗಿರಲಿ, ಪಾರ್ಕಿಂಗಿನ ಡ್ಯೂಟಿ ಆಗಿರಲಿ, ಆಹಾರ ವಿತರಿಸುವವರಾಗಿರಲಿ, ಶಿಸ್ತುಪಾಲನೆ, ಸ್ವಚ್ಛತೆ, ನೀರು ವಿತರಣೆ ಆಗಿರಲಿ ಅಥವಾ ಯಾವುದೇ ವಿಭಾಗ ಆಗಿರಲಿ; ಅತಿಥಿಗಳಿಗೆ ಸೌಕರ್ಯಕರವಾದ ವ್ಯವಸ್ಥೆ ಮಾಡಲು ಮತ್ತು ಅವರಿಗೆ ಯಾವುದೇ ವಿಧದ ತೊಂದರೆ ಉಂಟಾಗದಂತೆ ಮಾಡಲು ಸಾಧ್ಯವಾದಷ್ಟು ಪ್ರಯತ್ನಿಸಬೇಕಾಗಿದೆ.

ಅದೇರೀತಿ ಅತಿಥಿಗಳೊಡನೆ ನಾನು ಹೇಳಲು ಬಯಸುತ್ತೇನೆ. ನೀವು ಒಂದು ಸದುದ್ದೇಶಕ್ಕಾಗಿ ಹಝ್ರತ್ ಮಸೀಹ್ ಮೌಊದ್[(ಅ)]ರ ಅತಿಥಿಗಳಾಗಿ ಇಲ್ಲಿಗೆ ಬಂದಿರುವಿರಿ. ಲೌಕಿಕ ಗೌರವ ಮತ್ತು ಲೌಕಿಕ ಸೇವೆಯನ್ನು ಬಯಸದೆ ಒಬ್ಬ ನೈಜ ಮುಸ್ಲಿಮನ ವೈಶಿಷ್ಟ್ಯವಾದ ಉನ್ನತ ನೈತಿಕಗುಣಗಳಲ್ಲಿ ಇನ್ನಷ್ಟು ಅಭಿವೃದ್ಧಿ ಉಂಟುಮಾಡಬೇಕೆಂಬ ಗುರಿಯನ್ನು ತಮ್ಮ ಮುಂದಿರಿಸಬೇಕು. ಅಲ್ಲಾಹನಿಗಾಗಿ ಯಾತ್ರೆ ಮಾಡುವವರಿಗೆ ಲೌಕಿಕವಾದ ಸೌಕರ್ಯಗಳ ಕಡೆಗೆ ಬಹಳ ಕಡಿಮೆ ಗಮನವಿರುತ್ತದೆ. ಕೆಲವೊಮ್ಮೆ ವ್ಯವಸ್ಥೆಗಳಲ್ಲಿ ಕೊರತೆಗಳು ಕಂಡುಬರುತ್ತವೆ. ಆದರೆ ಅವುಗಳನ್ನು ಕಡೆಗಣಿಸಬೇಕು. ನಮ್ಮ ಉದ್ದೇಶ ಆಧ್ಯಾತ್ಮಿಕ ಭೋಜನವನ್ನು ಗಳಿಸುವುದಾಗಿದೆ ಎಂಬ ಯೋಚನೆ ಬರುವ ಪ್ರತಿಯೊಬ್ಬ ಅಹ್ಮದೀ ಮುಸ್ಲಿಮನ ಹೃದಯದಲ್ಲಿ ಇರುವುದಾದರೆ ಆತಿಥೇಯ ಮತ್ತು ಅತಿಥಿ ಇಬ್ಬರು ಕೂಡ ಪ್ರೀತಿ ಮತ್ತು ಸ್ನೇಹದಿಂದ ಈ ದಿನಗಳನ್ನು ಕಳೆಯಬಹುದಾಗಿದೆ.

ಆಗಮಿಸುವ ಎಲ್ಲ ಅತಿಥಿಗಳೊಂದಿಗೆ ಒಂದೇ ರೀತಿಯಲ್ಲಿ ವರ್ತಿಸಲು ವ್ಯವಸ್ಥಾಪಕರು ಪ್ರಯತ್ನಿಸುತ್ತಾರೆ. ಆದರೂ ಕೆಲವೊಮ್ಮೆ ಹೆಚ್ಚು ಕಮ್ಮಿ ಆಗಿ ಬಿಡುತ್ತದೆ. ಅದನ್ನು ಅತಿಥಿಗಳು ಕಡೆಗಣಿಸಬೇಕು. ಹಝ್ರತ್ ಮಸೀಹ್ ಮೌಊದ್[(ಅ)] ಅತಿಥಿಗಳಿಗೆ ಬಹಳ ಆದರ ಮತ್ತು ಗೌರವ ಕೊಡುತ್ತಿದ್ದರು. ತಮ್ಮ ಅಗತ್ಯಗಳನ್ನು ಹಿಂಜರಿಕೆ ತೋರಿಸದೇ ಹೇಳಿರಿ ಎಂದು ಹಝ್ರತ್ ಮಸೀಹ್ ಮೌಊದ್[(ಅ)] ಅತಿಥಿಗಳೊಡನೆ ಹೇಳುತ್ತಿದ್ದರು. ಆದರೆ ಅದು ಸಾಧಾರಣ ದಿನಗಳ ಸ್ಥಿತಿಯ ಬಗ್ಗೆಯಾಗಿದೆ. ಜಲ್ಸದ ದಿನಗಳಲ್ಲಿ ಅತಿಥಿಗಳಿಗೆ ಒಂದೇ ವ್ಯವಸ್ಥೆ ಇರಬೇಕು ಮತ್ತು ಒಂದೇ ವ್ಯವಸ್ಥೆಯಡಿಯಲ್ಲಿ ಅತಿಥಿ ಸತ್ಕಾರ ಮಾಡಬೇಕು ಎಂದು ಹಝ್ರತ್ ಮಸೀಹ್ ಮೌಊದ್[(ಅ)] ಹೇಳುತ್ತಿದ್ದರು.

ಇಲ್ಲಿಗೆ ಬರುವುದರ ನಿಜವಾದ ಉದ್ದೇಶ ದೀನನ್ನು ಕಲಿಯುವುದು, ತಮ್ಮ ಹೃದಯ ಮತ್ತು ಮನಸ್ಸನ್ನು ಪರಿಶುದ್ಧಗೊಳಿಸುವುದು ಹಾಗೂ ಅಲ್ಲಾಹನ ಸಾಮೀಪ್ಯ ಗಳಿಸುವುದರ ಹಂತಗಳನ್ನು ಏರುವುದಾಗಿದೆ ಎಂದು ಹಝ್ರತ್

ಮಸೀಹ್ ಮೌಊದ್(ಅ) ಅತಿಥಿಗಳಿಗೆ ಮನವರಿಕೆ ಮಾಡಿಸುತ್ತಿದ್ದರು. ಆದ್ದರಿಂದ ಇದೇ ಉದ್ದೇಶಕ್ಕಾಗಿ ನೀವೆಲ್ಲರೂ ಪ್ರತಿ ವರ್ಷ ಇಲ್ಲಿ ಬಂದು ಸೇರುತ್ತೀರಿ. ಜಲ್ಸ ಹಾಲಿನಲ್ಲಿ ಕುಳಿತುಕೊಂಡು ಜಲ್ಸದ ಕಾರ್ಯಕ್ರಮಗಳನ್ನು ಮತ್ತು ಭಾಷಣಗಳನ್ನು ಗಮನವಿಟ್ಟು ಆಲಿಸಿರಿ ಮತ್ತು ಅವುಗಳಿಂದ ಪ್ರಯೋಜನ ಪಡೆಯಲು ಪ್ರಯತ್ನಿಸಿರಿ.

ಹಝ್ರತ್ ಮಸೀಹ್ ಮೌಊದ್(ಅ)ರಿಗೆ ಅಲ್ಲಾಹನು ತನ್ನ ಅನುಗ್ರಹದಿಂದ ಎಂತಹ ಜಮಾಅತನ್ನು ದಯಪಾಲಿಸಿರುವನು ಎಂದರೆ, ಅದು ದೇಶಗಳ ಮತ್ತು ಸಮುದಾಯಗಳ ಗಡಿಗಳನ್ನು ಹಾಗೂ ಪಂಗಡಗಳನ್ನು ಕೊನೆಗೊಳಿಸಿದೆ ಮತ್ತು ಒಂದು ಶ್ರೇಷ್ಠವಾದ ಸಹೋದರತೆಯ ಬುನಾದಿ ಹಾಕಲ್ಪಟ್ಟಿದೆ. ಜಮಾಅತಿನ ಸಾಹೋದರ್ಯ ಸಂಬಂಧ ಸುದೃಢಗೊಳಿಸುವುದು ಕೂಡ ಜಲ್ಸದ ಒಂದು ಉದ್ದೇಶವಾಗಿದೆ ಎಂದು ಹಝ್ರತ್ ಮಸೀಹ್ ಮೌಊದ್(ಅ) ಹೇಳಿದ್ದರು. ಪರಸ್ಪರ ಭೇಟಿಯ ಮೂಲಕ ಈ ಉದ್ದೇಶ ಈಡೇರುತ್ತಿದೆ ಎಂಬುದು ಸ್ಪಷ್ಟ. ಆದರೆ ಸತ್ಯವಿಶ್ವಾಸಿ ತನ್ನ ಸಮಯವನ್ನು ಸರಿಯಾಗಿ ವಿನಿಯೋಗಿಸಬೇಕು ಎಂಬುದು ಅತ್ಯಗತ್ಯವಾಗಿದೆ. ಅದಕ್ಕಾಗಿ ಜಲ್ಸದ ಪೂರ್ತಿ ದಿನದ ಕಾರ್ಯಕ್ರಮದ ನಂತರ ಲಭಿಸುವ ಸಮಯದಲ್ಲಿ ಪರಸ್ಪರ ಭೇಟಿಯಾಗಿರಿ, ಒಟ್ಟಿಗೆ ಕುಳಿತುಕೊಳ್ಳಿರಿ, ಮಾತನಾಡಿರಿ ಮತ್ತು ಸಂಬಂಧಗಳನ್ನು ವರ್ಧಿಸಿರಿ. ಆದರೆ ಸಮಯ ವ್ಯರ್ಥವಾಗುವ ರೀತಿಯಲ್ಲಿ ಅದರಲ್ಲಿ ತಲ್ಲೀನರಾಗಬೇಡಿರಿ.

ಇಷ್ಟು ದೊಡ್ಡ ಪ್ರಮಾಣದಲ್ಲಿ ಜನರು ಒಟ್ಟುಗೂಡುವಾಗ ಕೆಲವು ಅಹಿತಕರವಾದ ಸಂಗತಿಗಳು ಕೂಡ ನಡೆಯುತ್ತವೆ. ನೆನಪಿಡಿರಿ, ಯಥಾರ್ಥ ಸತ್ಯವಿಶ್ವಾಸಿ ಕೋಪವನ್ನು ನಿಯಂತ್ರಿಸುವವನಾಗಿರುತ್ತಾನೆ. ಆದ್ದರಿಂದ ಜಲ್ಸದ ವಾತಾವರಣದ ಪರಿಶುದ್ಧತೆಯನ್ನು ಮುಂದಿರಿಸಿರಿ ಮತ್ತು ಪರಸ್ಪರರ ತಪ್ಪುಗಳನ್ನು ಕಡೆಗಣಿಸಿರಿ. ಯಾವನಾದರೂ ಕಾರ್ಯಕರ್ತನಿಂದ ಏನಾದರೂ ತಪ್ಪು ನಡೆದರೂ ಕೂಡ ಅಸಮಾಧಾನಗೊಳ್ಳದೆ ತಾಳ್ಮೆ ತೋರಿಸಬೇಕು ಮತ್ತು ಸಹನೆಯಿಂದ ಕ್ಷಮಿಸಬೇಕು. ಹೃದಯ ವೈಶಾಲ್ಯ ಉಂಟಾದರೆ ಎಲ್ಲ ಜಗಳಗಳು ಮತ್ತು ಅತೃಪ್ತಿಗಳು ಕೊನೆಗೊಳ್ಳುವುದು. ಆದ್ದರಿಂದ ವಿಶಾಲ ಹೃದಯವನ್ನು ತೋರಿಸುವುದು ನಿಮ್ಮ ಕರ್ತವ್ಯವಾಗಿದೆ ಎಂದು ಅತಿಥಿಗಳೊಡನೆ ಮತ್ತು ಸೇವೆ ಮಾಡುವವರೊಡನೆ ನಾನು ಹೇಳುತ್ತೇನೆ.

ಹಝ್ರತ್ ಮಸೀಹ್ ಮೌಊದ್(ಅ)ರ ಬಯಕೆ ಅನುಸಾರ ಪರಸ್ಪರ ಪ್ರೀತಿ ಮತ್ತು ಸಹೋದರತೆಯ ಮಾದರಿಯಾಗಲು ನೀವು ಪ್ರಯತ್ನಿಸಬೇಕು. ಇದನ್ನೇ ಅಲ್ಲಾಹನು ಸತ್ಯವಿಶ್ವಾಸಿಗಳ ಕುರಿತು ಹೇಳಿರುವನು. ಆದ್ದರಿಂದ ಸಣ್ಣ ಪುಟ್ಟ ವಿಷಯಗಳಲ್ಲಿ ಸಿಕ್ಕಿಬೀಳುವುದಕ್ಕೆ ಬದಲಾಗಿ ತಮ್ಮ ಜೀವಿತದ ಉದ್ದೇಶವನ್ನು ಗಳಿಸಲು ಪ್ರಯತ್ನಿಸಬೇಕು. ಅದು ಅಲ್ಲಾಹನ ಮುಂದೆ ಬಾಗುವುದರಿಂದ, ಸಾಷ್ಟಾಂಗ ಮಾಡುವುದರಿಂದ, ಆರಾಧನೆ ಮತ್ತು ದೇವಸ್ಮರಣೆ ಮಾಡುವುದರಿಂದ ಲಭಿಸುತ್ತದೆ. ಇಲ್ಲಿಗೆ ಆಗಮಿಸಿರುವ ಪ್ರತಿಯೊಬ್ಬ ಅತಿಥಿ ತಮ್ಮ ಯಾತ್ರೆಯನ್ನು ಅಲ್ಲಾಹನಿಗಾಗಿ ಮಾತ್ರ ಮೀಸಲಾಗಿಡಲು ಪ್ರಯತ್ನಿಸಬೇಕು. ಸೇವಕರು ಮತ್ತು ಅತಿಥಿಗಳು ನೆನಪಿಡಬೇಕಾದ ಮತ್ತೊಂದು ಸಂಗತಿಯೇನೆಂದರೆ, ಕೆಲವು ಅಹ್ಮದಿಯೇತರರು ಮತ್ತು ಮುಸ್ಲಿಮೇತರರು ಸಹ ಇಲ್ಲಿಗೆ ಬಂದಿರುತ್ತಾರೆ. ಆದ್ದರಿಂದ ಉನ್ನತ ಸ್ವಭಾವಗುಣಗಳನ್ನು ತೋರಿಸಿದರೆ, ಅದು ಮೌನವಾದ ತಬ್ಲೀಗ್ ಆಗುವುದು. ಅನ್ಯರ ಮೇಲೆ ಅದರ ಆಳವಾದ ಪ್ರಭಾವ ಉಂಟಾಗುತ್ತದೆ ಮತ್ತು ಅವರಿಗೆ ಇಸ್ಲಾಮಿನ ಕಡೆಗೆ ಗಮನ ಉಂಟಾಗುತ್ತದೆ ಹಾಗೂ ಅವರು ಇಸ್ಲಾಮಿನ ಪಾಠಗಳ ವೈಶಿಷ್ಟ್ಯಗಳಿಂದ ಪ್ರಭಾವಿತರಾಗುತ್ತಾರೆ.

ಒಂದು ಮುಖ್ಯವಾದ ಸಂಗತಿಯೇನೆಂದರೆ, ಇಲ್ಲಿಗೆ ಆಗಮಿಸುವವರು ಪರಸ್ಪರ ಸಲಾಮ್ ಹೇಳುವುದನ್ನು ರೂಢಿಗೊಳಿಸಬೇಕು. ಇದರ ಕಡೆಗೆ ಅತಿ ಹೆಚ್ಚು ಗಮನ ನೀಡಲು ಪ್ರಯತ್ನಿಸಬೇಕು. ಬಹಳ ಅನುಗ್ರಹೀತ ಮತ್ತು ಪರಿಶುದ್ಧವಾದ ಪ್ರಾರ್ಥನೆಯನ್ನು ನಮಗೆ ಕಲಿಸಿಕೊಡಲಾಗಿದೆ. ಆತಿಥೇಯನು ಮತ್ತು ಅತಿಥಿ ಪರಸ್ಪರ ಸಲಾಂ ಹೇಳುವಾಗ ಅವರು ಪ್ರತಿಯೊಂದು ವಿಧದ ಭಯ ಮತ್ತು ಚಿಂತೆಯಿಂದ ಸುರಕ್ಷಿತರಾಗುತ್ತಾರೆ. ಮಾತ್ರವಲ್ಲ ಈ ಪ್ರಾರ್ಥನೆ ಅನ್ಯೋನ್ಯ ಉಪಕಾರಿಯಾಗಿರುತ್ತದೆ. ಆದ್ದರಿಂದ ಈ ಬಗ್ಗೆ ಈ ದಿನಗಳಲ್ಲಿ ಹೆಚ್ಚಿನ ಗಮನ ನೀಡಿರಿ. ಹೀಗೆ ನಾವು ಎಲ್ಲೆಡೆ ಸಮಾಧಾನ, ಪ್ರೀತಿ ಮತ್ತು ಸ್ನೇಹವನ್ನು ಹರಡುವವರಾಗಲಿ ಹಾಗೂ ಈ ವಾತಾವರಣ ಅಲ್ಲಾಹನ ಸಲುವಾಗಿ ಪ್ರೀತಿ ಮತ್ತು ಸಹೋದರತೆಯ ವಾತಾವರಣವಾಗಲಿ. ಪ್ರತಿಯೊಂದು ವಿಧದ ಸ್ವಾರ್ಥಗಳಿಂದ ತಮ್ಮನ್ನು ಸ್ವತಃ ದೂರವಿರಿಸಲು ನಾವು ಪ್ರಯತ್ನಿಸಬೇಕಾಗಿದೆ. ಈ ದಿನಗಳಲ್ಲಿ ತಮ್ಮ ಜೀವಿತಗಳಲ್ಲಿ ಒಂದು ಪರಿವರ್ತನೆ ಉಂಟುಮಾಡಲು ಪ್ರಯತ್ನಿಸಿರಿ. ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿರುವರು. ಸಲಾಮನ್ನು ಹರಡಿರಿ. ಅದಕ್ಕಾಗಿ ಪರಿಚಿತರಿಗೂ ಅಪರಿಚಿತರಿಗೂ ನೀವು ಸಲಾಂ ಹೇಳಿರಿ.

ಹಝ್ರತ್ ಮಸೀಹ್ ಮೌಊದ್(ಅ)ರ ಒಂದು ಘಟನೆಯನ್ನು ನಿಮಗೆ ಹೇಳುತ್ತೇನೆ. ಮುಸ್ಲಿಮರ ಮತ್ತು ಕ್ರೈಸ್ತರ ನಡುವೆ **ಜಂಗೇ ಮುಖದ್ದಸ್**ನ ಹೆಸರಿನಲ್ಲಿ ಒಂದು ವಾದ ವಿವಾದ ನಡೆದಿತ್ತು. ಹಝ್ರತ್ ಮಸೀಹ್ ಮೌಊದ್(ಅ) ತಂಗಿದ್ದ ಸ್ಥಳದಲ್ಲಿ ಅತಿಥಿಗಳು ಹೆಚ್ಚಾಗಿ ಆಗಮಿಸಿದ ಕಾರಣದಿಂದ ವ್ಯವಸ್ಥಾಪಕರು ಹಝ್ರತ್ ಮಸೀಹ್ ಮೌಊದ್(ಅ)ರಿಗೆ ಆಹಾರ ನೀಡಲು ಮರೆತು ಬಿಟ್ಟಿದ್ದರು. ತಡರಾತ್ರಿಯಾಯಿತು. ಬಹಳ ಹೊತ್ತು ಕಾದುನಿಂತ ನಂತರ ಹಝ್ರತ್ ಮಸೀಹ್ ಮೌಊದ್(ಅ) ಊಟದ ಬಗ್ಗೆ ಕೇಳಿದರು. ಆಗ ಎಲ್ಲ ವ್ಯವಸ್ಥಾಪಕರು ಬಹಳ ಚಿಂತಿತರಾದರು. ಅಷ್ಟರಲ್ಲಿ ಬಹಳ ತಡವಾಗಿ ಬಿಟ್ಟಿತ್ತು. ಊಟ ಬಾಕಿ ಉಳಿದಿರಲಿಲ್ಲ. ಮಾರುಕಟ್ಟೆ ಕೂಡ ಮುಚ್ಚಿ ಹೋಗಿತ್ತು. ಈ ಸ್ಥಿತಿಯ ಬಗ್ಗೆ ಹಝ್ರತ್ ಮಸೀಹ್ ಮೌಊದ್(ಅ)ರಿಗೆ ಗೊತ್ತಾದಾಗ ಅವರು ಹೇಳಿದರು: ಇಷ್ಟು ಗಾಬರಿಗೊಳ್ಳಬೇಕಾದ ಅಗತ್ಯವೇನು? ಊಟದ ಮೇಜಿನಲ್ಲಿ ಉಳಿದಿರುವ ಆಹಾರವನ್ನೇ ತನ್ನಿರಿ. ಅಲ್ಲಿ ನೋಡಿದಾಗ, ರೊಟ್ಟಿಯ ಕೆಲವು ತುಂಡುಗಳ ಹೊರತು ಬೇರೇನೂ ಇರಲಿಲ್ಲ. ಪಲ್ಯ, ಸಾರು ಇತ್ಯಾದಿಗಳು ಕೂಡ ಇರಲಿಲ್ಲ. ಹಝ್ರತ್ ಮಸೀಹ್ ಮೌಊದ್(ಅ) ನನಗೆ ಇದೇ ಸಾಕು ಎಂದು ಹೇಳಿ ಅದನ್ನೇ ತಿಂದರು. ಹಝ್ರತ್ ಪೈಗಂಬರ್(ಸ)ರ ಅತ್ಯಂತ ದೊಡ್ಡ

